ಸಂಚರಿಸುತ್ತಿರುವ ಖಾಸಗಿ ಒಪ್ಪಂದ ವಾಹನ, ಮಜಲು ವಾಹನ ಹಾಗೂ ಅಖಿಲ ಭಾರತ ಪ್ರವಾಸಿ ವಾಹನಗಳನ್ನು ಸೇರಿದಂತೆ ಒಟ್ಟು 1139 ವಾಹನಗಳನ್ನು Seize/impound ಮಾಡಿ ಕಾನೂನು ರೀತ್ಯ ಕ್ರಮ ವಹಿಸಲಾಗಿದೆ.

ಊ) ರಾಜ್ಯದ ಗಡಿಭಾಗದಲ್ಲಿ ತನಿಖಾ ಠಾಣೆಗಳನ್ನು ಸ್ಥಾಪಿಸಿದ್ದು, ಸದರಿ ತನಿಖಾ ಠಾಣೆಗಳಲ್ಲಿ ಕಾರ್ಯನಿರ್ವಹಿಸುವ ಮೋಟಾರು ವಾಹನ ನಿರೀಕ್ಷಕರ ಮೂಲಕ ಅನಧಿಕೃತವಾಗಿ ಸಂಚರಿಸುವ ಬಸ್ಸುಗಳ ಮೇಲೆ ಪ್ರಕರಣಗಳನ್ನು ದಾಖಲಿಸಿ ಮೋಟಾರು ವಾಹನ ಕಾಯ್ದೆ 1988ರ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ.

ಏಪ್ರಿಲ್–2014 ರಿಂದ ಫೆಬ್ರವರಿ–2015ರವರೆಗೆ ರಾಜ್ಯದ ಗಡಿಭಾಗದ ತನಿಖಾ ಠಾಣೆಯಲ್ಲಿ 629 ವಾಹನಗಳ ಮೇಲೆ ಪ್ರಕರಣಗಳನ್ನು ದಾಖಲಿಸಿದ್ದು 27 ವಾಹನಗಳನ್ನು ಸೀಜ್/ ವಶಪಡಿಸಿಕೊಂಡು, ಒಟ್ಟು ₹ 9,43,500/–ಗಳ ದಂಡದ ಮೊತ್ತವನ್ನು ವಸೂಲು ಮಾಡಲಾಗಿದೆ.

ಆಸ್ಪತ್ರೆಯಲ್ಲಿ ಹೆಚ್–1ಎನ್–1 ಪೀಡಿತ ರೋಗಿ ಸಾವು

2671 (3256); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಬೆಂಗಳೂರಿನ ಪ್ರತಿಷ್ಠಿತ ರಾಜೀವ್‌ಗಾಂಧಿ ಆಸ್ಪತ್ರೆಯಲ್ಲಿ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಹೆಚ್1 ಎನ್1 ಪೀಡಿತ ರೋಗಿ ಬಿ.ಜಿ. ಗಣೇಶ ಸಾವಿನ ಹಿಂದೆ ಆಸ್ಪತ್ರೆಯ ವೈದ್ಯರು ನಿರ್ಲಕ್ಷ್ಯವಿತ್ತೆ; ವಿವರ ಒದಗಿಸುವುದು;

ಆ) ರೋಗಿಯ ಸಾವಿಗೆ ನಿಜವಾದ ಕಾರಣಕರ್ತರಾರು; ಈ ಸಾವಿಗೆ ಕುಟುಂಬ ವರ್ಗದವರ ಆರೋಪಿಸುತ್ತಿರುವುದು ನಿಜವೇ;

ಇ) ವೈದ್ಯಕೀಯ ಶಿಕ್ಷಣ ಇಲಾಖೆ ಮೂಲಕ ನಿಜಾಂಶ ಅರಿಯಲು ತನಿಖೆ ನಡೆಸಲಾಗಿದೆಯೇ; ವೈದ್ಯರು ಲೋಪವೆಸಗಿರುವುದು ನಿಜವೇ (ವಿವರ ಒದಗಿಸುವುದು);

ಈ) ಆಸ್ಪತ್ರೆಯಲ್ಲಿ ಜನರೇಟರ್ ಕೆಟ್ಟು ವ್ಯಕ್ತಿಯ ಸಾವು ಸಂಭವಿಸಿದೆ; ಈ ರೀತಿ ಸಮಸ್ಯೆ ಬಹು ಸಮಯದಿಂದ ಇದೆ ಎಂದು ರೋಗಿಗಳು ದೂರುತ್ತಿದ್ದಾರೆ; ಈ ಬಗ್ಗೆ ಇಲಾಖೆ ಸ್ಪಷ್ಟನೆ ಏನು;

ಉ) ಆಸ್ಪತ್ರೆಯ ನಿರ್ಲಕ್ಷ್ಯಗಳ ವಿರುದ್ಧ ಆಗಾಗ ದೂರುಗಳು ಕೇಳಿ ಬರುತ್ತಿದ್ದು, ಸತ್ಯಾಂಶ ಅರಿವಿಗೆ ಆಮೂಲಾಗ್ರ ತನಿಖೆ ಏಕೆ ಕೈಗೊಳ್ಳಬಾರದು?

ಡಾ॥ ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) **ಮತ್ತು ಆ)** ಶ್ರೀ ಬಿ.ಜಿ. ಗಣೇಶ್ ಇವರಿಗೆ ಹೆಚ್1 ಎನ್1 ರೋಗ ದೃಢಪಟ್ಟ ಹಿನ್ನೆಲೆಯಲ್ಲಿ ದಿನಾಂಕ: 18.02.2015 ರಿಂದ 19.02.2015 ರವರೆಗೆ ಅಮರ್ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆದಿದ್ದು, ಇವರ ಆರೋಗ್ಯ ಸ್ಥಿತಿ ವಿಷಮರೂಪ ತಲುಪಿದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ದಿನಾಂಕ: 20.02.2015 ರಂದು ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ದಾಖಲಾಗಿರುತ್ತಾರೆ. ಆದರೆ, ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ದಾಖಲಾತಿಯ ಪ್ರಕಾರ ಶ್ರೀ ಬಿ.ಜಿ. ಗಣೇಶ ಇವರು ಹೆಚ್1ಎನ್1 ಖಾಯಿಲೆಯಿಂದ ಬಳಲುತ್ತಿರುವುದರ ಜೊತೆಗೆ ಬೈಲಾಟ್ರಲ್ ನ್ಯೂಮೋನಿಯದಿಂದ (ಎಆರ್‌ಡಿಎಸ್) ಅಕ್ಯೂಟ್ ರೆಸ್ಪಿರೇಟರಿ ಡಿಸ್ಟ್ರೆಸ್ ಸಿಂಡ್ರೋಮ್ ಆಗಿದ ಕಾರಣ (ICU) ಐಸಿಯು ಬೆಡ್ ಅಗತ್ಯವಿರುವ ಕಾರಣದಿಂದಾಗಿ ಇವರನ್ನು ಎಸ್‌ಡಿಎಸ್ ಕ್ಷಯ ರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆಗೆ ದಿನಾಂಕ 20.02.2015 ರಂದು ಸಂಜೆ 6.00 ಗಂಟೆ ಸುಮಾರಿಗೆ ಕಳುಹಿಸಲಾಗಿದೆ. ಈ ರೋಗಿಯನ್ನು ತಕ್ಷಣವೇ ಮೆಡಿಕಲ್ (ICU) ಐಸಿಯುನಲ್ಲಿ ದಾಖಲಾತಿ ಮಾಡಿ ನುರಿತ ವೈದ್ಯರಿಂದ ಅಗತ್ಯವಾದ ಎಲ್ಲಾ ಚಿಕಿತ್ಸೆಯನ್ನು ನೀಡಲಾಗಿದ್ದು, ಈ ರೋಗಿಯ ಆರೋಗ್ಯ ಸ್ಥಿತಿ ಆಗಾಗ ಸುಧಾರಿಸಿ ಮತ್ತೊಮ್ಮೆ ಉಲ್ಬಣಗೊಳ್ಳುತ್ತಿದ್ದ ಕಾರಣ ಇವರಿಗೆ ಕೃತಕ ಉಸಿರಾಟದ

(ವೆಂಟಿಲೇಟರ್) ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು ಹಾಗೂ ರೋಗಿಯ ಚಿಂತಾಜನಕ ಸ್ಥಿತಿಯ ಬಗ್ಗೆ ರೋಗಿಗಳ ಸಂಬಂಧಿಕರಿಗೆ ಮಾಹಿತಿ ನೀಡಲಾಗಿತ್ತು.

ಆದರೆ, ದಿನಾಂಕ: 28.02.2015ರ ಮಧ್ಯಾಹ್ನದಿಂದಲೇ ಈ ರೋಗಿಯ ಆರೋಗ್ಯ ಸ್ಥಿತಿಯು ಗಂಭೀರ ಸ್ವರೂಪ ಪಡೆದು, ವಿಷಮ ರೂಪಕ್ಕೆ ತಲುಪಿದ ವೇಳೆಯಲ್ಲಿಯೇ ಈ ರೋಗಿಯು ಇದ್ದ ವಿಭಾಗಕ್ಕೆ ವಿದ್ಯುತ್ ಕಡಿತ ಉಂಟಾಗಿ ವಿದ್ಯುತ್ ಸ್ಥಗಿತಗೊಂಡಿರುತ್ತದೆ. ಈ ಸಂದರ್ಭದಲ್ಲಿ ರೋಗಿಗೆ ಕೃತಕ ಉಸಿರಾಟವನ್ನು ಅಂಬೂಬ್ಯಾಗ್ ಸಹಿತ ಆಮ್ಲಜನಕ ನೀಡಿ, ಅವರನ್ನು ಈ ವಿಭಾಗಕ್ಕೆ ಅತಿ ಸಮೀಪದಲ್ಲೆ ಇರುವ ಸರ್ಜಿಕಲ್ (ICU) ಐಸಿಯುನಲ್ಲಿ ಖಾಲಿ ಇರುವ ಹಾಸಿಗೆಗೆ ವರ್ಗಾಯಿಸುವ ಮುನ್ನವೇ ಈ ರೋಗಿಯ ಆರೋಗ್ಯ ಸ್ಥಿತಿಯು ಮತ್ತಷ್ಟೂ ವಿಷಮರೂಪಕ್ಕೆ ತಲುಪಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಈ ರೋಗಿಗೆ ಚಿಕಿತ್ಸೆ ನೀಡುವಲ್ಲಿ ವೈದ್ಯರ ನಿರ್ಲಕ್ಷ್ಯತೆ ಇರುವುದಿಲ್ಲ. ರೋಗಿಗೆ ಚಿಕಿತ್ಸೆ ಒದಗಿಸಲಾಗಿದ್ದ ವಿಭಾಗದಲ್ಲಿ ವಿದ್ಯುತ್ ಕಡಿತ ಉಂಟಾಗಿದ್ದರಿಂದಲೇ ರೋಗಿಯು ಮೃತಪಟ್ಟಿರುವುದಾಗಿ ರೋಗಿಯ ಸಂಬಂಧಿಕರಿಗೆ ಆ ಸಂದರ್ಭದಲ್ಲಿ ಉಂಟಾದ ಸಹಜ ಭಾವನೆಯಾಗಿದ್ದು, ರೋಗಿಯ ಸಾವಿಗೆ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯದ ಬಗ್ಗೆ ಕುಟುಂಬ ವರ್ಗದವರು ಆರೋಪಿಸುತ್ತಿರುವುದು ನಿರಾಧಾರವಾಗಿರುತ್ತದೆ. ರೋಗಿಯ ಪರಿಸ್ಥಿತಿಯು ತೀರಾ ಹದಗೆಟ್ಟಿದ್ದುದರಿಂದ ರೋಗಿಯ ಸಾವು ಉಂಟಾಗಿರುತ್ತದೆ.

ಇ) ದಿನಾಂಕ: 02.03.2015ರಂದು ಮಾನ್ಯ ಆರೋಗ್ಯ ಸಚಿವರು ಹಾಗೂ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಸಂಸ್ಥೆಗೆ ಭೇಟಿ ನೀಡಿ ಈ ರೋಗಿಯ ಸಾವಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿದ್ದು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ರೋಗಿಯ ಸಾವಿನ ಬಗ್ಗೆ ವಿವರವಾದ ತನಿಖೆ ನಡೆಸಿ ವರದಿ ನೀಡುವಂತೆ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಆದೇಶಿಸಿರುತ್ತಾರೆ. ಈ ಆದೇಶದಂತೆ ವೈದ್ಯಕೀಯ ಶಿಕ್ಷಣ

ನಿರ್ದೇಶಕರು ದಿನಾಂಕ: 06.03.2015 ರಂದು ಈ ಸಂಸ್ಥೆಗೆ ಭೇಟಿ ನೀಡಿ, ತನಿಖೆ ನಡೆಸಿದ್ದು, ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತನಿಖಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) ಈ ಸಂಸ್ಥೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ವಿದ್ಯುತ್ ನಿರ್ವಹಣೆಗಾಗಿ 250 ಕೆವಿಎ ಜನರೇಟರ್ ಅಳವಡಿಸಲಾಗಿದೆ. ವಿದ್ಯುತ್ ಕಡಿತಗೊಂಡ ಸಂದರ್ಭದಲ್ಲಿ ಕೇವಲ 5 ರಿಂದ 6 ಸೆಕೆಂಡ್‌ಗಳಲ್ಲಿ ಸ್ವಯಂಚಾಲಿತ ವಿಧಾನದ ಮೂಲಕ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಈ ಸಂಸ್ಥೆಯಲ್ಲಿ ಉಪಯೋಗಿಸುತ್ತಿರುವ 250 ಕೆವಿಎ ಜನರೇಟರ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದರ ಕಾರ್ಯನಿರ್ವಹಣೆಗೂ ರೋಗಿಯ ಸಾವಿಗೂ ಯಾವುದೇ ಸಂಬಂಧವಿರುವುದಿಲ್ಲ. ಅಲ್ಲದೆ ಇಂತಹ ಸಮಸ್ಯೆ ಬಹುದಿನಗಳಿಂದ ಇದೆ ಎಂಬುದು ಸತ್ಯಕ್ಕೆ ದೂರವಾದ ಆರೋಪವಾಗಿರುತ್ತದೆ.

ಉ) ಈ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ರೋಗಿಗಳಿಗೆ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯತೆ ವಹಿಸಿರುವ ಬಗ್ಗೆ ಈವರೆಗೂ ಯಾವುದೇ ದೂರುಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಆಸ್ಪತ್ರೆಯಲ್ಲಿನ ನಿರ್ಲಕ್ಷ್ಯತೆ ಬಗ್ಗೆ ದೂರುಗಳು ದಾಖಲಾದಲ್ಲಿ ಆಮೂಲಾಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ನ್ಯಾಯ ಬೆಲೆ ಅಂಗಡಿಗಳು

2675 (2809); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ನ್ಯಾಯಬೆಲೆ ಅಂಗಡಿಗಳು, ವಿತರಣೆ ಕೇಂದ್ರಗಳು ಗ್ರಾಮಗಳಿಂದ ಮತ್ತು ತಾಂಡ ಪ್ರದೇಶಗಳಿಂದ ಬಹಳಷ್ಟು ದೂರವಿರುವುದರಿಂದ ಅರ್ಹ ಪಡಿತರ ಫಲಾನುಭವಿಗಳಿಗೆ ತೀರಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;